ಒ.ಎಸ್. - 69/2014

ಪಿ.ಡಬ್ಲ್ಯು. - 02

**ದಿನಾಂಕ 20-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - ಪ್ರತಿವಾದಿಯರ ಪರ ಶ್ರೀ ಎಸ್ .ಎ ವಕೀಲರಿಂದಃ**

ನಾನು ಬಿಕಾಂ ವರೆಗೆ ವ್ಯಾಸಂಗ ಮಾಡಿರುತ್ತೇನೆ. ವಾದಿ ಪರಿಚಯ 40-45 ವರ್ಷಗಳಿಂದ ನನಗೆ ಇದೆ . ನಾನು ಬಟ್ಟೆ ವ್ಯಾಪಾರ ಮಾಡುತ್ತೇನೆ . ವಾದಿ ನರಸಿಂಹ ನಾಯಕ್ ಹೆಬ್ರಿಯ ಸಿಂಡಿಕೇಟ್ ಬ್ಯಾಂಕ್ ಶಾಖೆಯಲ್ಲಿ ಕ್ಲರ್ಕ್ ಆಗಿ ಕೆಲಸ ಮಾಡುತಿದ್ದರು. ಅದೇ ಶಾಖೆಯಲ್ಲಿ ನಮ್ಮ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಸಾಲವನ್ನು ಪಡೆದಿದ್ದೇನೆ ಎಂದರೆ ಸರಿ. ಗೋಪಾಲ ಕುಕ್ಕಜೆ ರವರ ಪರಿಚಯ ಸುಮಾರು 20 ವರ್ಷಗಳಿಂದ ಇದೆ. ನಾನು ಮತ್ತು ವಾದಿ ಒಟ್ಟಾಗಿ ವಕೀಲರ ಕಚೇರಿಗೆ ಹೋಗಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರಿಸಿದ್ದೇವೆ ಎಂದರೆ ಸರಿ. ನಾನು ಯಾವುದೇ ದಾಖಲೆಗೆ ಮತ್ತು ಪ್ರಮಾಣ ಪತ್ರಕ್ಕೆ ಸಹಿ ಮಾಡುವ ಮೊದಲು ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿ ನಡುವೆ ಆದಂತಹ ಕರಾರನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಸದ್ರಿ ಕರಾರಿಗೆ ನಾನು ನನ್ನ ಸಹಿಯನ್ನು ಉಡುಪಿಯಲ್ಲಿರುವ ಸರ್ವೀಸ್ ಬಸ್ ಸ್ಟ್ಯಾಂಡ್ ನ ಬಳಿ ಇರುವ ಒಂದು ಕಚೇರಿಯಲ್ಲಿ ಮಾಡಿರುತ್ತೇನೆ . ದಿ. 07-12-2008 ರ ಕರಾರನ್ನು ಬಿಟ್ಟರೇ ವಾದಿ ಮತ್ತು ಪ್ರತಿವಾದಿ ನಡುವೆ ಬೇರೆ ಕರಾರು ಆಗಿಲ್ಲ ಎಂದರೆ ಸರಿ . ಸದ್ರಿ ಕರಾರಿನಲ್ಲಿ ಇರುವ 9 ನೇ ಷರತ್ತಿನ ಪ್ರಕಾರ ಸದ್ರಿ ದಾವಾ ಶೆಡ್ಯೂಲ್ ಆಸ್ತಿಯಲ್ಲಿ ಸ್ವಾಧೀನ ಹೊಂದಿ ಒಕ್ಕಲಿದ್ದವನನ್ನು ಒಕ್ಕಲೆಬ್ಬಿಸಿ ಖರೀದಿ ಪತ್ರವನ್ನು ವಾದಿ ಮಾಡಿಕೊಡಬೇಕು ಎಂದು ಷರತ್ತು ಇದೆ ಎಂದರೆ ಸರಿ . ನಾನು ಹಾಕಿದ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿ ಮತ್ತು ಪ್ರತಿವಾದಿಯ ನಡುವೆ 7-08-2008 ರಲ್ಲಿ ಮತ್ತು 07-12-2008 ರಂದುಕರಾರು ಆಗಿದೆ ಎಂದು 2 ದಿನಾಂಕಗಳನ್ನು ನಮೂದಿಸಿದ್ದು ಈ ದಿನಾಂಕಗಳಲ್ಲಿ ಯಾವ ದಿನಾಂಕ ಸರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನೆನಪಿಲ್ಲ ಎಂದು ತಿಳಿಸಿರುತ್ತಾರೆ . ವಾದಿ ನ್ಯಾಯಾಲಯಕ್ಕೆ ಏನು ಏನು ದಾಖಲೆಗಳನ್ನು ಸಲ್ಲಿಸಿದ್ದಾರೆ ಎನ್ನುವ ಮಾಹಿತಿ ನನಗೆ ಗೊತ್ತಿಲ್ಲ . ವಾದಿ

ಪ್ರತಿವಾದಿಗೆ ರೂ 1,00,000 ನ್ನು ಕೊಡುವಾಗ ನಾನು ಇದ್ದೆ ಆದರೇ ಯಾವ ದಿನಾಂಕ ಎಂದು ನನಗೆ ನೆನಪಿಲ್ಲ. ರಸೀದಿಯನ್ನು ಎಲ್ಲಿ ಬೆರಳಚ್ಚು ಮಾಡಿದರು ಎಂದು ನನಗೆ ಗೊತ್ತಿಲ್ಲ . ನಿಪಿ 2 ರಸೀದಿಯನ್ನು ಯಾವಾಗ ಮತ್ತು ಎಲ್ಲಿ ಬರೆದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಪ್ರತಿವಾದಿ ಮನೆಯಲ್ಲಿ ಬರೆಯಲಾಯಿತು. ಸದ್ರಿ ರಸೀದಿಯನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ಸದ್ರಿ ರಸೀದಿಯನ್ನು ನಾನು ಓದಿ ಅರ್ಥ ಮಾಡಿಕೊಂಡಿರುತ್ತೇನೆ . ದಿ. 07-12-2021 ರಂದು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದಾದರೂ ಕರಾರು ಆಗಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ . ದಿ. 07-12-2007 ರಂದು ವಾದಿ ಪ್ರತಿವಾದಿಗೆ ಎಷ್ಟು ಹಣ ಕೊಟ್ಟರು ಎಂದು ನೆನಪಿಲ್ಲ . ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರಿಸುವಾಗ ನಾನು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ . 07-12-2007 ರಂದು ನಗದು ರೂಪದಲ್ಲಿ ವಾದಿ ಪ್ರತಿವಾದಿಗೆ ಹಣ ಕೊಟ್ಟಿರುತ್ತಾರೆ . ಕರಾರು ಆಗುವಾಗ ರೂ 1,00,000 ನ್ನು ವಾದಿ ಪ್ರತಿವಾದಿಗೆ ಕೊಟ್ಟಿದ್ದನ್ನು ಬಿಟ್ಟು ಉಳಿದ ಹಣವನ್ನು ನಗದು ರೂಪದಲ್ಲಿ ಅಥವಾ ಚೆಕ್ ರೂಪದಲ್ಲಿ ಕೊಟ್ಟಿದ್ದನ್ನು ನಾನು ನೋಡಿಲ್ಲ. ನಿಪಿ 3 ಯವಾಗ ಮತ್ತು ಎಲ್ಲಿ ಆಯಿತು ಎಂದು ನನಗೆ ನೆನಪಿಲ್ಲ . ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 2 ನೇ ಪ್ಯಾರಾದಲ್ಲಿ ಹೇಳಿರುವ ಅಂಶಗಳನ್ನು ನಾನೇ ಸ್ವತಃ ಹೇಳಿ ಬರೆಯಸಿದ್ದಾ ಅಥವಾ ವಾದಿ ಹೇಳಿದ ಮೇರೆಗೆ ತಯಾರಿಸಲಾಯಿತಾ ಎಂದರೆ ಸಾಕ್ಷಿ ವಾದಿ ಹೇಳಿದ ಮೇರೆಗೆ ಹಾಗೂ ಕರಾರಿನಲ್ಲಿ ಏನು ಇತ್ತು ಅದನ್ನು ನೋಡಿಕೊಂಡು ತದನಂತರ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಯಲಾಯಿತು ಎಂದು ತಿಳಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ವಾದಿಯರು ಕರಾರನ್ನು ನೋಡಿಕೊಂಡು ತಯಾರು ಮಾಡಿಸಿರುತ್ತಾರೆ . ನಿಪಿ 2 ಮತ್ತು 3 ಸೃಷ್ಟಿ ಮಾಡಿ ಹಾಜರುಪಡಿಸಿದ ದಾಖಲೆಗಳು ಎಂದರೆ ಸರಿಯಲ್ಲ . ವಿಜಯ ದಾವಾ ಸ್ವತ್ತಿನಲ್ಲಿ ಒಕ್ಕಲು ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ . ಒಕ್ಕಲು ಇದ್ದವನಿಗೆ ಮತ್ತು ವಾದಿ ನಡುವೆ ಏನು ವ್ಯವಹಾರ ಆಗಿದೆ ಎಂದು ನನಗೆ ಗೊತ್ತಿಲ್ಲ . ಆದ್ದರಿಂದ ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಈ ಬಗ್ಗೆ ಹೇಳಲಿಲ್ಲ ಎಂದರ ಸರಿ . ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಕಾಣಿಸಿರುವ 3 ನೇ

ಪ್ಯಾರಾದ ವಿಷಯಗಳನ್ನು ನಾನು ಹೇಳಿ ಬರೆಸಿಲ್ಲ . ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ . ನಿಪಿ 2 ಮತ್ತು 3 ರಲ್ಲಿ ಕಾಣಿಸಿರುವ ಹಣವನ್ನು ವಾದಿಯು ಪ್ರತಿವಾದಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ . ನಾನು ಮತ್ತು ವಾದಿಯರು ತುಂಬಾ ವರ್ಷಗಳಿಂದ ಸ್ನೇಹಿತರಾಗಿರುವುದರಿಂದ ವಾದಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ . ವಾದಿಯ ರಸೀದಿ ಬಗ್ಗೆ ಬಿಟ್ಟರೇ ನನಗೆ ಬೇರೆ ವ್ಯವಹಾರ ಗೊತ್ತಿಲ್ಲ .

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.